Akashvani: Bangalore
National Bulletin In Kannada
15.10.2026: 13.10hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
15.10.2026: 13.10hrs
**********

**ಮುಖ್ಯಾಂಶಗಳು:**

1. ವಿಜಯವಾಡದ ಪುನ್ನಮಿ ಘಾಟ್‌ನಲ್ಲಿಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಂದ ರಾಷ್ಟ್ರೀಯ ಸರಸ್ ಜೀವನೋಪಾಯ ಮೇಳಕ್ಕೆ ಚಾಲನೆ
2. ಲೇಹ್‌ನ ಕುಶೋಕ್ ಬಕುಲ ರಿಂಪೋಚೆ ವಿಮಾನ ನಿಲ್ದಾಣದಲ್ಲಿ ನೂತನ ಟರ್ಮಿನಲ್ ಲೋಕಾರ್ಪಣೆಗೊಳಿಸಿದ ಪ್ರಧಾನಿ ನರೇಂದ್ರ ಮೋದಿ
3. ಜಗತ್ತಿನ ೧೦೦ ದೇಶಗಳಿಗೆ ಭಾರತದ ರಕ್ಷಣಾ ಉತ್ಪನ್ನಗಳು ರಫ್ತು ; ರಕ್ಷಣಾ ಸಚಿವ ರಾಜನಾಥ್ ಸಿಂಗ್
4. ಕೃಷಿ ವಲಯದಲ್ಲಿ ಮಹಿಳೆಯರ ಕೊಡುಗೆ ಗುರುತಿಸಲು ನವದೆಹಲಿಯಲ್ಲಿಂದು ಮಹಿಳಾ ಕಿಸಾನ್ ದಿವಸ್ ಆಚರಣೆ
5. ಮಾಂಟೆನೆಗ್ರೊದ ಬುಡ್ವಾದಲ್ಲಿ ಇದೇ ೧೮ರಂದು ೧೯ ವರ್ಷದೊಳಗಿನ ವಿಶ್ವ ಬಾಕ್ಸಿಂಗ್ ಚಾಂಪಿಯನ್ ಶಿಪ್‌ನ ಎರಡನೇ ಆವೃತ್ತಿ ಆರಂಭ

*********

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಂದು ವಿಜಯವಾಡದ ಪುನ್ನಮಿ ಘಾಟ್‌ನಲ್ಲಿ ರಾಷ್ಟ್ರೀಯ ಸರಸ್ ಜೀವನೋಪಾಯ ಮೇಳ ೨೦೨೬' ಅನ್ನು ಉದ್ಘಾಟಿಸಲಿದ್ದಾರೆ. ದೆಹಲಿ-ಎನ್‌ಸಿಆರ್ ಹೊರಗೆ ಇಂತಹ ರಾಷ್ಟ್ರಮಟ್ಟದ ಮೇಳ ನಡೆಯುತ್ತಿರುವುದು ಇದೇ ಮೊದಲು. ವಿಜಯವಾಡದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಸರಸ್ ಮೇಳ ೨೦೨೬, ದೇಶಾದ್ಯಂತ ಇರುವ ಸ್ವಸಹಾಯ ಗುಂಪುಗಳ ಗ್ರಾಮೀಣ ಮಹಿಳೆಯರಿಗೆ ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಲು, ವಿಶಾಲ ಮಾರುಕಟ್ಟೆಗಳನ್ನು ತಲುಪಲು ಮತ್ತು ತಮ್ಮ ಜೀವನೋಪಾಯವನ್ನು ಬಲಪಡಿಸಿಕೊಳ್ಳಲು ಒಂದು ವೇದಿಕೆಯನ್ನು ಒದಗಿಸುತ್ತದೆ. ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು ಆಂಧ್ರಪ್ರದೇಶ ಸರ್ಕಾರದ ಸಹಯೋಗದೊಂದಿಗೆ ಆಯೋಜಿಸಿರುವ ಈ ಮೇಳದಲ್ಲಿ, ಸುಮಾರು ೧,೫೦೦ ಮಹಿಳಾ ಉದ್ಯಮಿಗಳು ಮತ್ತು ಕುಶಲಕರ್ಮಿಗಳು ಭಾಗವಹಿಸುತ್ತಿದ್ದಾರೆ. ಇಲ್ಲಿನ ೬೫೦ಕ್ಕೂ ಹೆಚ್ಚು ಮಳಿಗೆಗಳಲ್ಲಿ ಸಾಂಪ್ರದಾಯಿಕ ಕೈಮಗ್ಗ ಉತ್ಪನ್ನಗಳು, ಕರಕುಶಲ ವಸ್ತುಗಳು, ಸಾವಯವ ಉತ್ಪನ್ನಗಳು ಮತ್ತು ಗೃಹೋಪಯೋಗಿ ವಸ್ತುಗಳನ್ನು ಪ್ರದರ್ಶಿಸಲಾಗುತ್ತಿದೆ. ಈ ಮೇಳದಲ್ಲಿ ಪ್ರಾದೇಶಿಕ ಖಾದ್ಯಗಳು, ಸಾಂಪ್ರದಾಯಿಕ ಕಲೆಗಳ ನೇರ ಪ್ರದರ್ಶನಗಳು ಹಾಗೂ ಪ್ಯಾಕೇಜಿಂಗ್, ಬ್ರಾಂಡಿಂಗ್ ಮತ್ತು ಆನ್‌ಲೈನ್ ಮಾರುಕಟ್ಟೆಯ ಕುರಿತಾದ ತರಬೇತಿ ಕಾರ್ಯಕ್ರಮಗಳೂ ಇವೆ. ರಾಷ್ಟ್ರೀಯ ಸರಸ್ ಮೇಳವು ಲಖ್ ಪತಿ ದೀದಿ ಉಪಕ್ರಮವನ್ನು ಪ್ರತಿಬಿಂಬಿಸುತ್ತದೆ. ಗ್ರಾಮೀಣ ಮಹಿಳೆಯರು ಸುಸ್ಥಿರ ಆದಾಯವನ್ನು ಗಳಿಸಲು ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಪಡೆಯಲು ಸಹಾಯ ಮಾಡುವುದು ಈ ಉಪಕ್ರಮದ ಗುರಿಯಾಗಿದೆ.

*********

ಪ್ರಧಾನಿ ನರೇಂದ್ರ ಮೋದಿ ಅವರು ಇಂದು, ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಲಡಾಖ್‌ನಲ್ಲಿ ಸುಮಾರು ೩ ಸಾವಿರದ ೩೫೦ ಕೋಟಿ ರೂಪಾಯಿ ಮೌಲ್ಯದ ಐದು ಪ್ರಮುಖ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿ, ರಾಷ್ಟ್ರಕ್ಕೆ ಸಮರ್ಪಿಸಿದ್ದಾರೆ. ಈ ಯೋಜನೆಗಳು, ಸಂಪರ್ಕ ವ್ಯವಸ್ಥೆಯನ್ನು ಬಲಪಡಿಸುವ, ಇಂಧನ ಮೂಲಸೌಕರ್ಯವನ್ನು ಸುಧಾರಿಸುವ, ಸಾಂಸ್ಕೃತಿಕ

ಪರಂಪರೆಯನ್ನು ಸಂರಕ್ಷಿಸುವ ಮತ್ತು ಈ ಪ್ರದೇಶದಲ್ಲಿ ನೀರಿನ ಭದ್ರತೆಯನ್ನು ಹೆಚ್ಚಿಸುವ ಗುರಿ ಹೊಂದಿವೆ. ಈ ಸಂದರ್ಭದಲ್ಲಿ ಪ್ರಧಾನಿ, ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಲೇಹ್‌ನ ಕುಶೋಕ್ ಬಕುಲಾ ರಿಂಪೋಚೆ ವಿಮಾನ ನಿಲ್ದಾಣದಲ್ಲಿ, ೭೪೦ ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾದ ಹೊಸ ಪ್ರಯಾಣಿಕರ ಟರ್ಮಿನಲ್ ಕಟ್ಟಡವನ್ನು ಪ್ರಧಾನಿ ಉದ್ಘಾಟಿಸಿದರು. ಗಡಿ ರಸ್ತೆಗಳ ಸಂಸ್ಥೆ ನಿರ್ಮಿಸಿರುವ ೨೯೮ ಕಿಲೋಮೀಟರ್ ಉದ್ದದ ನಿಮ್ಮು-ಪದಮ್-ದಾರ್ಚಾ ರಸ್ತೆಯನ್ನು ಪ್ರಧಾನಿ ರಾಷ್ಟ್ರಕ್ಕೆ ಸಮರ್ಪಿಸಿದರು. ೯ ಮೆಗಾವ್ಯಾಟ್ ಸಾಮರ್ಥ್ಯದ, ಹನು ಸಣ್ಣ ಜಲವಿದ್ಯುತ್ ಯೋಜನೆ ಮತ್ತು ೭೭ ಕಿಲೋವ್ಯಾಟ್‌ನ, ಡಬಲ್-ಸರ್ಕ್ಯೂಟ್ ದಾಹ್-ಹನು-ಖಾಲ್ಸಿ ಪ್ರಸರಣ ಮಾರ್ಗವನ್ನೂ ಅವರು ಉದ್ಘಾಟಿಸಿದರು. ಲೇಹ್‌ನ ಸಿಂಧು ಘಾಟ್‌ನಲ್ಲಿ ಭಾರತದ ಮೊದಲ 'ಪೆಟ್ರೋಗ್ಲಿಫ್ ಸಂರಕ್ಷಣಾ ಉದ್ಯಾನವನ'ವನ್ನು ಹಾಗೂ 'ಪ್ರಾಜೆಕ್ಟ್ ಹಿಮ್ ಸರೋವರ್' ಅಡಿಯಲ್ಲಿ ४೦ ಹಳ್ಳಿಗಳಲ್ಲಿ ಅಭಿವೃದ್ಧಿಪಡಿಸಲಾದ ४೦ ಜಲಮೂಲಗಳನ್ನು ಪ್ರಧಾನಿ ರಾಷ್ಟ್ರಕ್ಕೆ ಸಮರ್ಪಿಸಿದರು.

*********

ಭಾರತ ತನ್ನದೇ ಆದ ರಕ್ಷಣಾ ಉತ್ಪನ್ನಗಳನ್ನು ಪ್ರಪಂಚದಾದ್ಯಂತ ಸುಮಾರು ೧೦೦ ದೇಶಗಳಿಗೆ ರಫ್ತು ಮಾಡುತ್ತಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ನವದೆಹಲಿಯಲ್ಲಿ ಇಂದು ನಡೆದ ಟೈಮ್ಸ್ ನೌ ಡಿಫೆನ್ಸ್ ಕಾನ್‌ಕ್ಲೇವ್ ೨೦೨೬ನಲ್ಲಿ ಮಾತನಾಡಿದ ಸಚಿವರು, ೨೦೧೩-೧೪ರಲ್ಲಿ ಕೇವಲ ೬೮೬ ಕೋಟಿ ರೂಪಾಯಿಗಳಷ್ಟಿದ್ದ ಭಾರತದ ರಕ್ಷಣಾ ರಫ್ತು, ೨೦೨೫-೨೬ರ ವೇಳೆಗೆ ३೮ ಸಾವಿರ ಕೋಟಿ ರೂಪಾಯಿಗಳಿಗೂ ಅಧಿಕಕ್ಕೆ ಏರಿಕೆಯಾಗಿದೆ. ಭಾರತವು ಮದ್ದುಗುಂಡುಗಳ ವಿಷಯದಲ್ಲಿ ಶೇಕಡಾ ೯೦ಕ್ಕಿಂತ ಹೆಚ್ಚು ಸ್ವಾವಲಂಬನೆಯನ್ನು ಸಾಧಿಸಿದೆ. ಭಾರತೀಯ ಸೇನೆಯ ಬಳಿ ಇರುವ ೧೭೫ ಬಗೆಯ ಮದ್ದುಗುಂಡುಗಳಲ್ಲಿ, ೧೫೯ ಬಗೆಯವು ದೇಶೀಯವಾಗಿ ತಯಾರಿಸಲ್ಪಟ್ಟಿವೆ ಎಂದು ಅವರು ತಿಳಿಸಿದ್ದಾರೆ. ಕಳೆದ ಹನ್ನೆರಡೂವರೆ ವರ್ಷಗಳಲ್ಲಿ, ರಕ್ಷಣಾ ವಲಯವು ತನ್ನ ಸಾಮರ್ಥ್ಯಗಳನ್ನು ವಿಸ್ತರಿಸಿಕೊಂಡಿರುವುದಲ್ಲದೆ, ರಾಷ್ಟ್ರೀಯ ಭದ್ರತೆಯನ್ನು ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಕಾರ್ಯತಂತ್ರದ ಬದಲಾವಣೆಯನ್ನೂ ಕಂಡಿದೆ. ಸರ್ಕಾರವು ಅಂತಹ ರಕ್ಷಣಾ ಪರಿಸರ ವ್ಯವಸ್ಥೆಯನ್ನು ನಿರ್ಮಿಸುತ್ತಿದೆ. ಇದು ರಾಷ್ಟ್ರೀಯ ಭದ್ರತೆಯನ್ನು ಬಲಪಡಿಸುವುದರ ಜೊತೆಗೆ ಆರ್ಥಿಕ ಬೆಳವಣಿಗೆಗೆ ಚಾಲನೆ ನೀಡುತ್ತದೆ ಮತ್ತು ಜಾಗತಿಕ ಭದ್ರತಾ ವ್ಯವಸ್ಥೆಯಲ್ಲಿ ಭಾರತದ ಪಾತ್ರವನ್ನು ಇನ್ನಷ್ಟು ಬಲಪಡಿಸುತ್ತದೆ ಎಂದು ಸಚಿವರು ಹೇಳಿದ್ದಾರೆ. ಭಾರತದ ಸಶಸ್ತ್ರ ಪಡೆಗಳು ಯಾವುದೇ ಸವಾಲನ್ನು ಎದುರಿಸಲು ಸಂಪೂರ್ಣ ಸನ್ನದ್ಧವಾಗಿವೆ. ಭಾರತದ ವಿರುದ್ಧ ಶಸ್ತ್ರಾಸ್ತ್ರಗಳನ್ನು ಕೈಗೆತ್ತಿಕೊಂಡ ಬಹುತೇಕ ಭಯೋತ್ಪಾದಕರನ್ನು, ಅವರು ಶಸ್ತ್ರ ಹಿಡಿದ ಒಂದು ವರ್ಷದ ಒಳಗಾಗಿಯೇ ಭದ್ರತಾ ಪಡೆಗಳು ನಿರ್ಮೂಲನೆ ಮಾಡಿವೆ ಎಂದು ರಾಜನಾಥ್ ಸಿಂಗ್ ತಿಳಿಸಿದರು.

*********

ಭಾರತೀಯ ಕೃಷಿಗೆ ಮಹಿಳೆಯರ ಕೊಡುಗೆಯನ್ನು ಗುರುತಿಸಲು ಕೃಷಿ ಮತ್ತು ರೈತ ಕಲ್ಯಾಣ ಇಲಾಖೆಯು ಇಂದು ನವದೆಹಲಿಯಲ್ಲಿ ರಾಷ್ಟ್ರೀಯ ಮಟ್ಟದ ಮಹಿಳಾ ಕಿಸಾನ್ ದಿವಸ್ ೨೦೨೬ ಅನ್ನು ಆಚರಿಸಲಾಗುತ್ತಿದೆ. ಭಾರತದ ಕೃಷಿ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿರುವ ಮಹಿಳೆಯರು ಬಿತ್ತನೆ, ನಾಟಿ ಮತ್ತು ಕೊಯ್ಲು ಮಾಡುವಿಕೆಯಿಂದ ಹಿಡಿದು ಜಾನುವಾರು ನಿರ್ವಹಣೆ, ಬೀಜ ಸಂರಕ್ಷಣೆ ಮತ್ತು ನೈಸರ್ಗಿಕ ಸಂಪನ್ಮೂಲ ನಿರ್ವಹಣೆಯವರೆಗೆ ಹಲವಾರು ಪ್ರಮುಖ ಪಾತ್ರಗಳನ್ನು ವಹಿಸುತ್ತಾರೆ ಎಂದು ಕೃಷಿ ಮತ್ತು ರೈತ ಕಲ್ಯಾಣ ಸಚಿವಾಲಯ ತಿಳಿಸಿದೆ. ಜೀವವೈವಿಧ್ಯ ಸಂರಕ್ಷಣೆ, ಉದ್ಯಮಶೀಲತಾ ಉಪಕ್ರಮಗಳು ಮತ್ತು ಸುಸ್ಥಿರ ಕೃಷಿ ಪದ್ಧತಿಗಳ ಅಳವಡಿಕೆಯಲ್ಲಿ ತಮ್ಮ ಸಾಂಪ್ರದಾಯಿಕ ಜ್ಞಾನದೊಂದಿಗೆ, ಮಹಿಳೆಯರು ಗ್ರಾಮೀಣ ಜೀವನೋಪಾಯವನ್ನು ಬಲಪಡಿಸುತ್ತಾರೆ ಮತ್ತು ಕೃಷಿ ಸ್ಥಿತಿಸ್ಥಾಪಕತ್ವವನ್ನು ಹೆಚ್ಚಿಸುತ್ತಾರೆ. ಅಭಿವೃದ್ಧಿ ಹೊಂದಿದ ಕೃಷಿ ಮತ್ತು ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸುವಲ್ಲಿ ಮಹಿಳಾ ರೈತರ ಪಾತ್ರ ಎಂಬ ವಿಷಯ ಹೊಂದಿರುವ ವಿಶ್ವಸಂಸ್ಥೆಯ ಅಂಣತಾರಾಷ್ಟ್ರೀಯ ಗ್ರಾಮೀಣ ಮಹಿಳೆಯರ ದಿನದೊಂದಿಗೆ ಈ ಕಾರ್ಯಕ್ರಮವು

ಹೊಂದಿಕೆಯಾಗುತ್ತದೆ ಎಂದು ಸಚಿವಾಲಯ ಹೇಳಿದೆ. ಭಾರತೀಯ ಕೃಷಿಯನ್ನು ಹೆಚ್ಚು ಉತ್ಪಾದಕ ಮತ್ತು ಸ್ವಾವಲಂಬಿಯನ್ನಾಗಿ ಮಾಡುವುದು ಮಹಿಳಾ ರೈತರ ಕೊಡುಗೆ ಎಂದು ಅದು ಮತ್ತಷ್ಟು ಒತ್ತಿ ಹೇಳಿದೆ. ಕೃಷಿ ಆಹಾರ ವ್ಯವಸ್ಥೆಗಳಿಗೆ ಅವರ ಕೊಡುಗೆಯನ್ನು ಗುರುತಿಸಲು ಜಾಗತಿಕ ವೇದಿಕೆಯನ್ನು ಒದಗಿಸುವ ವಿಶ್ವಸಂಸ್ಥೆಯು ೨೦೨೬ ಅನ್ನು ಅಂತರರಾಷ್ಟ್ರೀಯ ಮಹಿಳಾ ರೈತ ವರ್ಷ ಎಂದು ಘೋಷಿಸಿದೆ ಎಂದು ಸಚಿವಾಲಯವು ಎತ್ತಿ ತೋರಿಸಿದೆ. ಕೃಷಿಯಲ್ಲಿ ಮಹಿಳೆಯರಿಗೆ ಅವಕಾಶಗಳನ್ನು ಹೆಚ್ಚಿಸುವ ಮತ್ತು ಸಂಪನ್ಮೂಲಗಳು, ತಂತ್ರಜ್ಞಾನ ಮತ್ತು ಸಾಂಸ್ಥಿಕ ಬೆಂಬಲಕ್ಕೆ ಅವರ ಪ್ರವೇಶವನ್ನು ಬಲಪಡಿಸುವ ಅಗತ್ಯವನ್ನು ಘೋಷಣೆಯು ಎತ್ತಿ ತೋರಿಸಿದೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು, ವಿಸ್ತರಣಾ ಶಿಕ್ಷಣ ಸಂಸ್ಥೆಗಳಲ್ಲಿ ಈ ಕಾರ್ಯಕ್ರಮವನ್ನು ಆಚರಿಸಲಾಗುವುದು. ಕೃಷಿ ಪ್ರಗತಿ ಮತ್ತು ಗ್ರಾಮೀಣ ಸಮೃದ್ಧಿಯನ್ನು ಸಾಧಿಸುವಲ್ಲಿ ಮಹಿಳಾ ಸಬಲೀಕರಣದ ಮಹತ್ವದ ಮೇಲೆ ಕೇಂದ್ರೀಕರಿಸುವ ಈ ಕಾರ್ಯಕ್ರಮದಲ್ಲಿ ಚುನಾಯಿತ ಪ್ರತಿನಿಧಿಗಳು, ಅಧಿಕಾರಿಗಳು, ವಿಜ್ಞಾನಿಗಳು, ವಿಸ್ತರಣಾ ಕಾರ್ಯಕರ್ತರು ಮತ್ತು ಇತರ ಪಾಲುದಾರರು, ಜೊತೆಗೆ ೫೦-೧೦೦ ಮಹಿಳಾ ರೈತರು ಭಾಗವಹಿಸಲಿದ್ದಾರೆ.

*********

’ಜನ ಸೇವೆಯಿಂದ ದೇಶ ಸೇವೆ’ ಎಂಬ ಮಂತ್ರದಡಿ ಜನರ ಏಳಿಗೆಯ ಅಚಲ ಬದ್ಧತೆಯೊಂದಿಗೆ, ಸಾರ್ವಜನಿಕ ಸೇವೆಯ ೨೫ ವರ್ಷಗಳ ಪಯಣವನ್ನು ಪ್ರಧಾನಿ ನರೇಂದ್ರ ಮೋದಿ ಪೂರೈಸಿದ್ದಾರೆ. ಸೇವೆ ಮತ್ತು ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ, ೨೦೪೭ರ ವೇಳೆಗೆ ’ವಿಕಸಿತ ಭಾರತ’ ಗುರಿ ಸಾಧನೆಯತ್ತ ಸಾಗುತ್ತಿದೆ. ಅದರ ಭಾಗವಾಗಿ, ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದಿನ ಆವೃತ್ತಿಯಲ್ಲಿ ’ಆಯುಷ್ಮಾನ್ ಭಾರತ್ ಪಿಎಂ-ಜೆಎವೈ’ ಕುರಿತ ಒಂದು ವರದಿ ಇದೀಗ ಮೂಡಿಬರಲಿದೆ. ಬಡ ಮತ್ತು ನಿರ್ಗತಿಕ ಕುಟುಂಬಗಳಿಗೆ ವರ್ಷಕ್ಕೆ ೫ ಲಕ್ಷದವರೆಗೆ ನಗದುರಹಿತ ಆರೋಗ್ಯ ವಿಮೆಯನ್ನು ಒದಗಿಸುವ ಉದ್ದೇಶದಿಂದ ೨೦೧೮ ರಲ್ಲಿ ಪ್ರಾರಂಭವಾದ ಆಯುಷ್ಮಾನ್ ಭಾರತ್-ಪಿಎಂ-ಜೆಎವೈ ಯೋಜನೆಯು ಬಡತನ ಮತ್ತು ಆರೋಗ್ಯ ಸೇವೆಯ ನಡುವಿನ ಸಂಬಂಧವನ್ನೇ ಬದಲಾಯಿಸಿದೆ. ಪ್ರತಿ ಕುಟುಂಬಕ್ಕೆ ವಾರ್ಷಿಕ ೫ ಲಕ್ಷದವರೆಗಿನ ನಗದು ರಹಿತ ಚಿಕಿತ್ಸಾ ರಕ್ಷಣೆಯನ್ನು ಒದಗಿಸುವ ಈ ಯೋಜನೆಯು, ಭಾರತದ ಶೇಕಡ ೪೦ರಷ್ಟು ಅತ್ಯಂತ ಬಡ  ಜನಸಂಖ್ಯೆಯನ್ನು ಗುರಿಯಾಗಿಸಿಕೊಂಡಿದೆ. ಕ್ರಮೇಣ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ. ಜೂನ್ ೨೦೨೬ ರ ವೇಳೆಗೆ, ಇದು ೩೭ ಸಾವಿರದ ೪೧೩ ಸಾರ್ವಜನಿಕ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ  ೧ ಲಕ್ಷದ ೯೨ ಕೋಟಿ ಮೌಲ್ಯದ ೧೨ ಕೋಟಿ ೬೯ ಲಕ್ಷ ಆಸ್ಪತ್ರೆ ದಾಖಲಾತಿಗಳಿಗೆ ಅನುವು ಮಾಡಿಕೊಟ್ಟಿದೆ. ಇದರ ಪ್ರಭಾವವು ಮಹಿಳೆಯರ ವಿಷಯದಲ್ಲಿ ವಿಶೇಷವಾಗಿ ಗಮನಾರ್ಹವಾಗಿದೆ. ಒಟ್ಟು ಆಯುಷ್ಮಾನ್ ಕಾರ್ಡ್‌ಗಳಲ್ಲಿ ಸುಮಾರು ಶೇಕಡಾ ೪೯ರಷ್ಟು ಮತ್ತು ಅಧಿಕೃತ ಆಸ್ಪತ್ರೆ ದಾಖಲಾತಿಗಳಲ್ಲಿ ಸುಮಾರು ಶೇಕಡಾ ೪೮ರಷ್ಟು ಮಹಿಳೆಯರೇ ಇದ್ದಾರೆ. ಸಾಮಾಜಿಕ-ಆರ್ಥಿಕ ಸ್ಥಿತಿಯನ್ನು ಲೆಕ್ಕಿಸದೆ, ೭೦ ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಹಿರಿಯ ನಾಗರಿಕರನ್ನು ಒಳಗೊಳ್ಳುವಂತೆ ಈ ಯೋಜನೆಯನ್ನು ಮತ್ತಷ್ಟು ವಿಸ್ತರಿಸಲಾಗಿದೆ. ಆಯುಷ್ಮಾನ್ ವಂದನಾ ಕಾರ್ಡ್ ಆದಾಯದ ಮಿತಿಯಿಲ್ಲದೆ ೬ ಕೋಟಿ ಹಿರಿಯ ನಾಗರಿಕರಿಗೆ ವಿಸ್ತರಿಸಲ್ಪಟ್ಟಿದೆ - ಇದು ಭಾರತದ ಹಿರಿಯ ನಾಗರಿಕರಿಗೆ ಆರೋಗ್ಯ ರಕ್ಷಣೆಯ ಭರವಸೆಯನ್ನು ಒದಗಿಸುತ್ತದೆ.

*********

ಮಾಂಟೆನೆಗ್ರೊದ ಬುಡ್ವಾದಲ್ಲಿ ಇದೇ ೧೮ರಂದು ಪ್ರಾರಂಭವಾಗಲಿರುವ ೧೯ ವರ್ಷದೊಳಗಿನ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನ ಎರಡನೇ ಆವೃತ್ತಿಯಲ್ಲಿ, ೧೮ ಸದಸ್ಯರ ಭಾರತೀಯ ಬಾಕ್ಸಿಂಗ್ ತಂಡವು ಸ್ಪರ್ಧಿಸಲಿದೆ. ಎರಡು ವರ್ಷಗಳ ಹಿಂದೆ ಅಮೆರಿಕದ ಕೊಲೊರಾಡೊದಲ್ಲಿ ನಡೆದ ಚೊಚ್ಚಲ ಆವೃತ್ತಿಯಲ್ಲಿ, ಇಂಗ್ಲೆಂಡ್‌ನ ನಂತರ ಎರಡನೇ

ಸ್ಥಾನವನ್ನು ಪಡೆದು ಗಮನಾರ್ಹ ಸಾಧನೆ ಮಾಡಿದ್ದ ಭಾರತ, ಈ ಬಾರಿಯ ಟೂರ್ನಿಯಲ್ಲಿಯೂ ಹೆಚ್ಚಿನ ನಿರೀಕ್ಷೆಗಳೊಂದಿಗೆ ಕಣಕ್ಕಿಳಿಯುತ್ತಿದೆ. ೨೦೨೪ರ ಈ ಟೂರ್ನಿಯಲ್ಲಿ, ಭಾರತೀಯ ತಂಡವು ನಾಲ್ಕು ಚಿನ್ನ, ಎಂಟು ಬೆಳ್ಳಿ ಮತ್ತು ಐದು ಕಂಚಿನ ಪದಕಗಳನ್ನೊಳಗೊಂಡಂತೆ ಒಟ್ಟು ೧೭ ಪದಕಗಳನ್ನು ಗೆಲ್ಲುವ ಮೂಲಕ ಅದ್ಭುತ ಪ್ರದರ್ಶನ ನೀಡಿದೆ.ಪ್ರಸ್ತುತ ಭಾರತೀಯ ತಂಡದಲ್ಲಿ, ಈ ವರ್ಷದ ಆರಂಭದಲ್ಲಿ ಜಕಾರ್ತದಲ್ಲಿ ನಡೆದ ಏಷ್ಯನ್ ಅಂಡರ್-೧೯ ಬಾಕ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಗೆದ್ದವರು ಹಾಗೂ ಇತರ ತೂಕ ವಿಭಾಗಗಳಲ್ಲಿ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ವಿಜೇತರಾದವರು ಇದ್ದಾರೆ.

*****END****